**ಸಾಕ್ಷಿಯನ್ನು ದಿನಾಂಕಃ 08.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ಕೆ ಪಿ ವಕೀಲರಿಂದಃ**

6. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಖಾತೆ ಬದಲಾವಣೆ ಬಗ್ಗೆ ನಮ್ಮ ಕುಟುಂಬದಲ್ಲಿ ಯಾರೂ ತಕರಾರು ಮಾಡಿಲ್ಲ. ದಾವಾ ಸ್ವತ್ತನ್ನು 2003 ರ ಪೂರ್ವದಲ್ಲಿ ನಾನು ಯಾರಿಗೂ ಮಾರಾಟ ಮಾಡಲು ಪ್ರಯತ್ನ ಮಾಡಿಲ್ಲ. ನಿಪಿಃ8 ರ ದಾಖಲೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ಆ ದಾಖಲೆಯ ಪ್ರಕಾರ ನನಗೆ 2003-04 ರಲ್ಲಿ ನನ್ನ ತಂದೆಯ ಹೆಸರಿನಿಂದ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ಆ ಖಾತೆ ನನ್ನ ತಂದೆಯ ಪೌತಿ ಸಬೂಬು ಆಗಿದೆ ಎಂದರೆ ಸರಿ. ಅದಾದ ನಂತರದಲ್ಲಿ ನಾನು ನನ್ನಿಂದ ನನ್ನ ಸಹೋದರ 1 ನೇ ಪ್ರತಿವಾದಿಗೆ ನಾನು 2003-04 ರಲ್ಲಿ ಖಾತೆ ಬದಲಾವಣೆ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ನಿಪಿಃ7 ರ ದಾಖಲೆ ತೋರಿಸುತ್ತಿದ್ದು ಆ ಪ್ರಕಾರ ನಾನು 1 ನೇ ಪ್ರತಿವಾದಿಗೆ ಖಾತೆ ಮಾಡಿಕೊಟ್ಟಿದ್ದೇನೆ ಎಂದರೆ ಅದು ಸುಳ್ಳು ದಾಖಲೆ. ಆ ದಾಖಲೆಯ ಪ್ರಕಾರ ನಾನು ಫಾರಂ ನಂಬರ್ 20 ರಲ್ಲಿ ಒಪ್ಪಿಗೆ ಮೂಲಕ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಸಿಕೊಟ್ಟಿದ್ದೇನೆ ಎಂದರೆ ಆ ದಾಖಲೆ ಸೃಷ್ಠಿಸಿದ ಸುಳ್ಳು ದಾಖಲೆ ಆಗಿರುತ್ತದೆ. ಈಗ ನನಗೆ ಒಂದು ದಾಖಲೆ ತೋರಿಸುತ್ತಿದ್ದು ಅದು ನನಗೆ ಸಂಬಂಧಿಸಿದ ದಾಖಲೆ ಆಗಿರುತ್ತದೆ. ಅದನ್ನು ನಿಡಿಃ1 ಎಂದು ಗುರುತಿಸಲಾಯಿತು. ಸದರಿ ದಾಖಲೆ ಪ್ರಕಾರ ನನ್ನ ಹೆಸರಿಗೆ ಖಾತೆ 2022-23 ರಲ್ಲಿ ಬಂದಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ತನ್ನ ತಂದೆಯಿಂದ ಬಂದಿದೆ ಎಂದು ನುಡಿದಿರುತ್ತಾರೆ. ಈಗ ನನಗೆ

ಮತ್ತೊಂದು ದಾಖಲೆ ತೋರಿಸುತ್ತಿದ್ದು ಅದು ನನಗೆ ಸಂಬಂಧಿಸಿದ ದಾಖಲೆ ಆಗಿರುತ್ತದೆ. ಸದರಿ ದಾಖಲೆಯನ್ನು ನಿಡಿಃ 2 ಎಂದು ಗುರುತಿಸಲಾಯಿತು. ನಾನು ದಾವಾ ಆಸ್ತಿಯನ್ನು ಒಪ್ಪಿಗೆ ಮೂಲಕ ನನ್ನ ಅಣ್ಣ 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದರೂ ಸಹ ಅದು ನನ್ನ ಆಸ್ತಿ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

7. ಕೊಣಸಾಲೆಯಲ್ಲಿ ಇರುವ ಮನೆಯನ್ನು ಶಂಕರಯ್ಯ ಮತ್ತು ರಾಮಕೃಷ್ಣ ರವರಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ, ನಾವೆಲ್ಲಾ ಸೇರಿ ಅವರಿಗೆ ಬಿಟ್ಟುಕೊಟ್ಟಿದ್ದೇವೆ. ಆ ಪ್ರಕಾರ ಆ ಮನೆಯ ಖಾತೆ ಅವರಿಬ್ಬರ ಹೆಸರಿನಲ್ಲಿ ಮುಂದುವರಿದುಕೊಂಡು ಬರುತ್ತಿದೆ ಎಂದರೆ ಸರಿ. ನನ್ನ ಹೆಂಡತಿಯ ಹೆಸರು ಸುಮಾ ಕೆ ಎನ್. 2003 ರಲ್ಲಿ ನನ್ನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ಆ ಕಾರಣದಿಂದ ನಾನು ಹಾಗೂ ನನ್ನ ಹೆಂಡತಿ ಇಬ್ಬರೂ ಒಪ್ಪಿ ಒಪ್ಪಿಗೆ ಪತ್ರದ ದಾಖಲೆಗೆ ಸಹಿ ಮಾಡಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

8. ದಾವಾ ಸ್ವತ್ತಿಗೆ ಸಂಬಂಧಿಸಿದ ಆರ್ ಟಿ ಸಿ ದಾಖಲೆ ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ . ಸಾಕ್ಷಿಯು ಮುಂದುವರಿದು ಆ ರೀತಿ ತನಗೆ ಗೊತ್ತಿಲ್ಲದೇ ದಾಖಲೆಯನ್ನು ಸುಳ್ಳು ಸೃಷ್ಠಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2022-23 ರಲ್ಲಿ ದಾವಾ ಆಸ್ತಿಯ ಖಾತೆ ನನ್ನ ಹೆಸರಿನಲ್ಲಿ ಇತ್ತು. ದಾವಾ ಆಸ್ತಿಯ ಖಾತೆ 2003 ನೇ ಇಸವಿಯಿಂದಲೂ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ ವಿಷಯ ನನಗೆ ಗೊತ್ತಿದೆ ಎಂದರೆ

ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ವಿಭಾಗವಾಗಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಆ ಬಗ್ಗೆ ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ ಎಂದು ನುಡಿದಿರುತ್ತಾರೆ. 2014 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ನ್ಯಾಯಾಲಯದ ಡಿಕ್ರಿ ಮೂಲಕ ಅವರ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಅದು ಸುಳ್ಳು ದಾಖಲೆಯಾಗಿದ್ದು ಅದು ನನಗೆ ಗೊತ್ತಿರಲಿಲ್ಲ. ನನಗೆ ಆ ಬಗ್ಗೆ ಯಾವಾಗ ಗೊತ್ತಾಯಿತು ಎಂದರೆ 2024 ರಲ್ಲಿ ನಾನು ಸಾಲತೆಗೆದುಕೊಳ್ಳಲು ಹೋದಾಗ ನನ್ನ ಅಣ್ಣನ ಹೆಸರಿನಲ್ಲಿ ಖಾತೆ ಇದ್ದಿದ್ದುನನಗೆ ಗೊತ್ತಾಗಿದ್ದು, ಆ ಬಗ್ಗೆ ತಹಶೀಲ್ದಾರ್ ಕಛೇರಿಯಲ್ಲಿ ಆರ್ ಟಿ ಐ ಅಡಿಯಲ್ಲಿ ಅರ್ಜಿ ಸಲ್ಲಿಸಿದಾಗ ಖಾತೆ ಬದಲಾವಣೆ ಆದ ಬಗ್ಗೆ ದಾಖಲೇಗಳೇ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಆ ರೀತಿ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ, ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

9. ದಾವಾ ಸ್ವತ್ತಿನಲ್ಲಿ ಮೊದಲು ಭತ್ತ ಮತ್ತು ಕಬ್ಬು ಬೆಳೆಯುತ್ತಿದ್ದೆವು, ಈಗ 7-8 ವರ್ಷಗಳ ಹಿಂದೆ ತೆಂಗು ಮತ್ತು ಅಡಿಕೆ ಹಾಕಿದ್ದೇವೆ. ಸುಮಾರು 100 ತೆಂಗಿನ ಮರಗಳು ಇದ್ದು, 700-800 ಅಡಿಕೆ ಮರಗಳು ಇವೆ. ಅದಕ್ಕೆ ನೀರಾವರಿಗೆ ಒಂದು ಕೊಳವೆ ಬಾವಿ ಇದ್ದು, ಅದು ಗದ್ದೆ ಆಗಿರುವುದರಿಂದ ನೀರಿನ ಸಮಸ್ಯೆ ಇಲ್ಲ. ಕೊಳವೆ ಬಾವಿ ಯಿಂದ ಹನಿನೀರಾವರಿ ವ್ಯವಸ್ಥೆ ಮಾಡಲಾಗಿದೆ ಎಂದರೆ ಅದನ್ನು ನಾನೇ ಮಾಡಿದ್ದೇನೆ. ಕೊಳವೆ

ಬಾವಿಗೆ ನಾನು ಅನಧಿಕೃತವಾಗಿ ವಿದ್ಯುತ್ ಸಂಪರ್ಕ ತೆಗೆದುಕೊಂಡಿದ್ದೇನೆ. ಆ ರೀತಿ ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2014 ರಲ್ಲಿ ನ್ಯಾಯಾಲಯದ ಡಿಕ್ರಿಯ ಮೂಲಕ ದಾವಾ ಸ್ವತ್ತು 2 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿಯಲ್ಲ. ಆ ನಂತರ 2 ನೇ ಪ್ರತಿವಾದಿ ಸುಮಾರು 15 ಲಕ್ಷ ರೂಪಾಯಿ ಖರ್ಚು ಮಾಡಿ ದಾವಾ ಸ್ವತ್ತಿಗೆ ಮಣ್ಣು ಹೊಡೆಸಿ ಸಮತಟ್ಟು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ಇರುವ ಕೊಳವೆ ಬಾವಿಗೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ತೆಗೆದುಕೊಂಡಿದ್ದಾರೆ ಎಂದರೆ ಆ ರೀತಿ ಸುಳ್ಳು ದಾಖಲಾತಿ ಸೃಷ್ಟಿಸಿದ್ದಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2014 ರಿಂದ ಇಲ್ಲಿಯ ವರೆಗೆ 2 ನೇ ಪ್ರತಿವಾದಿ ಕಂದಾಯ ಪಾವತಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 2003 ರಿಂದ 2014 ರ ವರೆಗೆ ದಾವಾ ಆಸ್ತಿ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇತ್ತು, ಆ ನಂತರ ಇಲ್ಲಿಯ ವರೆಗೆ 2 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ನಾನು 2024 ರ ಪೂರ್ವದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಯಾವುದಾದರೂ ಪರಿಹಾರ ಕೋರಿ ದಾವೆ ಸಲ್ಲಿಸಿದ್ದೇನಾ ಎಂದರೆ ನನಗೆ 2024 ರಲ್ಲಿ ನನ್ನ ಅಣ್ಣನ ಹೆಸರಿನಲ್ಲಿ ಇದ್ದ ವಿಷಯ ಗೊತ್ತಾಗಿದೆ. ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಯರು ಅಭಿವೃದ್ಧಿ ಪಡಿಸಿ ಅದರಲ್ಲಿ ಫಲ ಬಿಡಲು ಪ್ರಾರಂಭವಾದ ನಂತರ ನಾನು ಈಗ ಏನಾದರೂ ಮಾಡಿ ಅದನ್ನು ಕಸಿದುಕೊಳ್ಳುವ ಉದ್ದೇಶದಿಂದ, ನನ್ನ ಹೆಸರಿನಲ್ಲಿ ಹಿಂದೆ ಖಾತೆ ಇದ್ದಿದ್ದನ್ನುದುರುಪಯೋಗ ಪಡಿಸಿಕೊಂಡು

ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕಳೆದ 20 ವರ್ಷಗಳಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇದ್ದಿದ್ದು, 2014 ರಲ್ಲಿ ನ್ಯಾಯಾಲಯದ ಡಿಕ್ರಿ ಮೂಲಕ 2 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ವರ್ಗಾವಣೆಯಾದ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಅಂಶಗಳನ್ನು ಸೃಷ್ಠಿ ಮಾಡಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು ತಹಶೀಲ್ದಾರ್, ಉಪ ವಿಭಾಗಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿದ ತಕರಾರುಗಳು ವಜಾ ಆಗಿವೆ ಎಂದರೆ, ಪ್ರತಿವಾದಿಯರು ರಾಜಕೀಯವಾಗಿ ಪ್ರಭಲರಾಗಿದ್ದು ಆ ರೀತಿ ಆಗಿರುತ್ತದೆ. ಪ್ರತಿವಾದಿಯರು ಮೋಸದಿಂದ ನ್ಯಾಯಲಯದ ಡಿಕ್ರಿ ಪಡೆದುಕೊಂಡಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 01.11.2025 ರಂದು ದಾವಾ ಸ್ವತ್ತಿನಿಂದ ನನ್ನನ್ನು ಹೊರಹಾಕಲು ಪ್ರಯತ್ನಿಸಿದರು ಎಂದು ಹೇಳಿರುವುದು ಸುಳ್ಳು ಆಗಿದ್ದು, ನಾನು 2003 ರ ನಂತರದಲ್ಲಿ ಯಾವ ಕಾಲಕ್ಕೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

**1 ನೇ** ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.